## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 820/2015

ಸಾಕ್ಷಿಗೆ ದಿನಾಂಕ 10-10-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 6 P.W.: 3

| | | |
|---|---|---|
| ಹೆಸರು | : | ಗಿರಿಜಮ್ಮ |
| ತಂದೆ/ಗಂಡನ ಹೆಸರು | : | ಮಲ್ಲಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಹಂಪಸಾಗರ-2 ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಹಂಪಸಾಗರದಲ್ಲಿ ನಮ್ಮ ಮನೆ ಇರುತ್ತದೆ. ಚಾಸಾ-1 ನನ್ನ ಮಗಳು. ಚಾಸಾ-7 ನನ್ನ ಗಂಡ. ಈಗ್ಗೆ ಸುಮಾರು 8 ವರ್ಷದ ಹಿಂದೆ ನಾನು, ನನ್ನ ಮಗ ಮತ್ತು ಗಂಡ ಸೇರಿ ಪೂನಾಕ್ಕೆ ಹೋಗಿದ್ದೆವು. ಆ ಸಮಯದಲ್ಲಿ ಹಂಪಸಾಗರದಲ್ಲಿ ನಮ್ಮ ಮನೆ ಕಳುವಾಗಿತ್ತು. ಆಗ ನಮ್ಮ ಮನೆಯ ಬೀರುವಿನಲ್ಲಿದ್ದ 30-40 ಸೀರೆ, ಬಂಗಾರ ಕಳುವಾಗಿತ್ತು. ಅದು ಬಂಗಾರದ ಚೈನು, ಜುಮಿಕಿ, ಬೋರಮಾಳ ಸರ ಮತ್ತು ಎರಡಾಣೆ ತೂಕದ ಬಂಗಾರ ಇತ್ತು. ಅದು ಎಷುಟ ತೊಲೆ ಇತ್ತು ಅಂತಾ ನನಗೆ ಹೇಳಲು ಬರುವುದಿಲ್ಲ. ಮತ್ಯಾವುದೇ ಸಾಮಾನು ಕಳುವಾಗಿಲ್ಲ ಮತ್ತು ಯಾವುದೇ ನಗದು ಕಳುವಾಗಿಲ್ಲ. ಸದರಿ ಕಳುವು ಯಾರು ಮಾಡಿದ್ರು ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ ನನಗೆ ಹೇಳಲು ಬರುವುದಿಲ್ಲ, ನನ್ನ ಮಗಳು ಘಟನೆಯ ಕುರಿತು ಪೋಲೀಸರಿಗೆ ದೂರು ನೀಡಿರುತ್ತಾರೆ. ನಂತರದಲ್ಲಿ ಪೋಲೀಸರು ಬಂಗಾರವನ್ನು ಮತ್ತು ಸೀರೆಗಳನ್ನು ನನಗೆ ತಂದು ಕೊಟ್ಟರು. ಪೋಲೀಸರು ಅದನ್ನು ಎಲ್ಲಿಂದ ತಂದುಕೊಟ್ರು, ಹೇಗೆ ಅಮಾನತ್ತುಪಡಿಸಿಕೊಂಡರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಠಾಣೆಗೆ ಹೋಗಿಲ್ಲ, ನಾನು ಘಟನೆಯ ಕುರಿತು ಪೋಲೀಸರಿಗೆ ಹೇಳಿಕೆ ನೀಡಿಲ್ಲ. ಯಾರು ಕಳುವು ಮಾಡಿದರೆನ್ನುವುದನ್ನು ನಾನು ತಿಳಿದುಕೊಂಡಿಲ್ಲ. ಸಾಕ್ಷಿಯು ನಿಪಿ-13 ಮತ್ತು 14 ನ್ನು ನೋಡಿ ಅದರಲ್ಲಿರುವ ಬಂಗಾರ ಮತ್ತು ಸೀರೆಗಳನ್ನು ನೋಡಿ ಗುರುತಿಸಿರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 11-12-2014 ರಂದು ಮದ್ಯಾಹ್ನ 2 ಗಂಟೆಗೆ ನಾನು ಪೂನಾಕ್ಕೆ ಹೋಗಿದ್ದೆ ಎಂದರೆ ಸರಿ. ದಿಃ 13-12-2014 ರಂದು ಚಾಸಾ-1 ರವರಿಗೆ ನನ್ನ ಮೈದುನ ಚಾಸಾ-9 ರವರು ಫೋನ್ ಮಾಡಿ ಮನೆ ಕಳುವಾದ ವಿಚಾರವನ್ನು ತಿಳಿಸಿದರು ಎಂದರೆ ಸರಿ. ಆಗ ನಾನು ನನ್ನ ಮಗಳಿಗೆ ಮನೆಗೆ ಹೋಗಿ ಪರಿಶೀಲನೆ ಮಾಡಲು ತಿಳಿಸಿದೆ ಎಂದರೆ ಸರಿ. ಆಗ ನನ್ನ ಮಗಳು ನನ್ನ ಮನೆಗೆ ಬಂದು ಪರಿಶೀಲನೆ ಮಾಡಿರುತ್ತಾಳೆಂದರೆ ಸರಿ. ಆ ಕಳ್ಳತನವು ದಿಃ 12-12-2014 ರ ಬೆಳಿಗ್ಗೆ 7 ಗಂಟೆಯಿಂದ ದಿಃ 13-12-2014 ರ ಬೆಳಿಗ್ಗೆ 10 ಗಂಟೆಯ ಅವಧಿಯ ಮಧ್ಯದಲ್ಲಿ ಆಗಿರಬಹುದು ಎಂದು ತಿಳಿಸಿದರೆಂದರೆ ಸರಿ. ನಮ್ಮ ಮನೆಯ ಬಾಗಿಲಿಗೆ ಇದ್ದ ಕಬ್ಬಿಣದ ಚಿಲಕವನ್ನು ಮುರಿದು ಮನೆ ಪ್ರವೇಶ ಮಾಡಿದರೆಂದರೆ ಸರಿ. ಒಟ್ಟು 160 ಗ್ರಾಂನ 10 ಬಂಗಾರದ ಆಭರಣಗಳು ಅವುಗಳ ಅಂದಾಜು ಮೌಲ್ಯ ರೂ.2.40 ಲಕ್ಷ ಆಗುತ್ತಿದ್ದು ಅವು ಕಳುವಾಗಿದ್ದವು ಎಂದರೆ ಸರಿ. ಒಟ್ಟು 450 ಗ್ರಾಂ ತೂಕದ ಬೆಳ್ಳಿ ಸಾಮಾನು ಅದರ ಅಂದಾಜು ಬೆಲೆ ರೂ.13 ಸಾವಿರ ಕಳುವಾಗಿತ್ತು ಎಂದರೆ ಸರಿ. 20 ರೇಷ್ಮೆ ಸೀರೆ, ನಗದು ಹಣ ರೂ.14 ಸಾವಿರ ಒಟ್ಟು ರೂ.2.95 ಸಾವಿರ ಮೌಲ್ಯದ ವಸ್ತುಗಳು ಕಳ್ಳತನವಾಗಿದ್ದವು ಎಂದರೆ ಸರಿ ಈ ವಿಚಾರವನ್ನು ನನ್ನ ಮಗಳು ದೂರಿನಲ್ಲಿ ಹೇಳಿಬರೆಸಿರುತ್ತಾಳೆಂದರೆ ಸರಿ. ಆ ಕುರಿತು ನನ್ನ ಮಗಳು ದೂರು ಕೊಟ್ಟಿರುತ್ತಾಳೆಂದರೆ ಸರಿ. ನಾನು ದಿಃ 14-12-2014 ರಂದು ನನ್ನ ಗಂಡನೊಂದಿಗೆ ಮನೆಗೆ ಬಂದು ಪರಿಶೀಲಿಸಿ ನೋಡಿದಾಗ ಒಂದು ಗಾಡ್ರೆಜ್ ಲಾಕರಿನಲ್ಲಿ ಅರಳಿನ ಉಂಗುರ, ಬಂಗಾರದ ಚೈನು, ಜುಮಿಕಿ ಬೆಂಡೋಲೆ ಹಾಗೂ 4 ಬಂಗಾರದ ಮುರುವು, 3 ಸುತ್ತಿನ ಎರಡು ಹರಳು, ಹವಳ ಸೇರಿ, 9 ಬಂಗಾರದ ಗುಂಡುಗಳು, 5 ಜೊತೆ ಬೆಂಡೋಲೆ, ಮೂಗುತಿ ನತ್ತು, ಬಂಗಾರದ ಗಟ್ಟಿಗಳನ್ನು ಪರಿಶೀಲಿಸಲಾಗಿ ಮತ್ತು ಬೆಳ್ಳಿ ಸಾಮಾನುಗಳಾದ ಆರತಿ ತಟ್ಟೆ, ಕುಂಕುಮ ಭರಣಿ, ಪನ್ನೀರ್ ಸಿಂಪಡಿಸುವುದು, ಬೆಳ್ಳಿಯ ಲೋಟ, ಪಂಚಾರತಿ, ಬೆಳ್ಳಿ ಗಂಟೆ, ಬೆಳ್ಳಿ ನಾಣ್ಯಗಳು ಹಾಗೂ ನಗದು ಹಣ ರೂ.11,500/-ಗಳು ಮನೆಯಲ್ಲಿದ್ದವು ಎಂದರೆ ಸರಿ. ಅದನ್ನು ಹೊರತುಪಡಿಸಿ ಉಳಿದ ಸಾಮಗ್ರಿಗಳು ಕಳ್ಳತನವಾಗಿರುತ್ತವೆಂತಾ ಹೇಳಿ ನಾನು ಪೋಲೀಸರಿಗೆ ದಿಃ 14-12-2014 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ.

ಪೋಲೀಸರು ನನಗೆ ಮತ್ತು ಚಾಸಾ-1 ರವರಿಗೆ ದಿಃ 30-12-2014 ರಂದು ಠಾಣೆಗೆ ಕರೆಸಿ ಕಳುವಾದ ವಸ್ತುಗಳು ಸಿಕ್ಕಿವೆ ಅದನ್ನು ಈ 1, 3 ಮತ್ತು 4 ನೇ ಆರೋಪಿತರೇ ಕಳುವು

ಮಾಡಿರುತ್ತಾರಂತಾ ನಮಗೆ ತೋರಿಸಿದರು ಮತ್ತು ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಹೇಳಿದರು ಹಾಗೂ 2 ನೇ ಆರೋಪಿತನ ಗುರುತು ಪತ್ತೆ ಹಚ್ಚುವುದು ಬಾಕಿ ಇದೆ ಅಂತಾ ನಮಗೆ ಹೇಳಿದರು ಎಂದರೆ ಸಾಕ್ಷಿಯು ಅದು ನನ್ನ ಮಗಳಿಗೆ ಗೊತ್ತು ಎನ್ನುತ್ತಾರೆ. ಆ ಬಗ್ಗೆ ನಾನು ದಿನಾಂಕಃ30-12-2014 ರಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು. ದಿಃ 07-07-2015 ರಂದು 2 ನೇ ಆರೋಪಿ ಪತ್ತೆಯಾಗಿದ್ದು ಆಗ ನಾನು ಪೋಲೀಸ್ ಠಾಣೆಗೆ ಹೋಗಿ ಆರೋಪಿತನನ್ನು ಮತ್ತು ಅವನಿಂದ ವಶಪಡಿಸಿಕೊಂಡ ವಸ್ತುಗಳನ್ನು ನೋಡಿ ಗುರುತಿಸಿ ಆ ಕುರಿತು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. 1 ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-

ನಿಪಿ-13 ಮತ್ತು 14 ರ ಫೋಟೋದಲ್ಲಿ ನಾನು ಇರುವುದಿಲ್ಲವೆಂದರೆ ಸರಿ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದರೆ ಸರಿ ಸಾಕ್ಷಿ ಮುಂದುವರೆದು ಇದನ್ನು ನನ್ನ ಮಗಳು ನನಗೆ ತಿಳಿಸಿದ್ದಾಳೆನ್ನುತ್ತಾರೆ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನಾನು ಯಾವುದೇ ಆರೋಪಿತರನ್ನು ನೋಡಿಲ್ಲ, ಯಾರು ಕಳುವು ಮಾಡಿರುತ್ತಾರೆನ್ನುವ ಬಗ್ಗೆ ನನಗೆ ಗೊತ್ತಿಲ್ಲ, ಪೋಲೀಸರು ನನಗೆ ಯಾವುದೇ ಆರೋಪಿತರನ್ನು ತೋರಿಸಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಸದರಿ ಪಾಟೀಸವಾಲನ್ನು 2 ರಿಂದ 4 ನೇ ಆರೋಪಿತರ ಪರ ವಕೀಲರು ಅನುಮೋದಿಸಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ